# ಕರ್ನಾಟಕ ಲೋಕಾಯುಕ್ತ

ಸಂಖ್ಯೆ: ಕಂಪ್ಲೆಂಟ್/ಉಪಲೋಕ್/ಬಿಜಿಎಂ/659/2019/ಪಿಪಿ ಬಹುಮಹಡಿಗಳ ಕಟ್ಟಡ,
ಡಾ: ಬಿ.ಆರ್. ಅಂಬೇಡ್ಕರ್ ವೀಧಿ,
ಬೆಂಗಳೂರು,
ದಿನಾಂಕ: 08/02/2021.

## ಕರ್ನಾಟಕ ಲೋಕಾಯುಕ್ತ ಕಾಯ್ದೆ 1984 ರ ಕಲಂ 12(3) ರನ್ವಯ ವರದಿ

ವಿಷಯ: ಶ್ರೀಮತಿ.ಖಾದರ್‌ಬಿ. ಲಕ್ಷ್ಮೇಶ್ವರ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ರಾಮದುರ್ಗ, ಬೆಳಗಾವಿ ಜಿಲ್ಲೆ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ದುರ್ನಡತೆ ಎಸಗಿರುವ ಕುರಿತು ವರದಿ.

*****

1. ಶ್ರೀ.ಶ್ರೀನಿವಾಸ ಎನ್.ವಿ. ನಾಗನಹಳ್ಳಿ, ಯಾಲಗಲವಾಡಿ ಅಂಚೆ, ಹುತ್ರಿದುರ್ಗ ಹೋಬಳಿ, ಕುಣಿಗಲ್ ತಾಲ್ಲೂಕು, ತುಮಕೂರು ಜಿಲ್ಲೆ (ಇನ್ನು ಮುಂದೆ 'ದೂರುದಾರರು' ಎಂದು ಕರೆಯಲ್ಪಡುತ್ತಾರೆ) ಇವರು ಶ್ರೀಮತಿ.ಖಾದರ್‌ಬಿ. ಲಕ್ಷ್ಮೇಶ್ವರ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ರಾಮದುರ್ಗ ತಾಲೂಕು. ಬೆಳಗಾವಿ ಜಿಲ್ಲೆ (ಇನ್ನು ಮುಂದೆ 'ಎದುರುದಾರರು' ಎಂದು ಕರೆಯಲ್ಪಡುತ್ತಾರೆ) ಇವರ ವಿರುದ್ಧ ದೂರನ್ನು ಸಲ್ಲಿಸಿರುತ್ತಾರೆ.

2. **ದೂರಿನ ಸಂಕ್ಷಿಪ್ತ ಸಾರಾಂಶ:**

ದೂರುದಾರರು ತಮ್ಮ ದೂರಿನಲ್ಲಿ ಎದುರುದಾರರು ಇಲಾಖೆಯ ನಿಯಮಗಳನ್ನು ಮೀರಿ ಅಂಗನವಾಡಿ ಕಾರ್ಯಕರ್ತೆಯರ ಬ್ಯಾಂಕಿನ ಖಾತೆಗೆ ರೂ.5 ಸಾವಿರ ಗಳನ್ನು ಜಮೆ ಮಾಡಿರುತ್ತಾರೆ, ಸುತ್ತೋಲೆಯ ಪ್ರಕಾರ ಸಾಧಿಲ್ವಾರು ಮತ್ತು ಫ್ಲೆಕ್ಸಿ ಫಂಡ್ ಇವೆರಡರ ವೆಚ್ಚಕ್ಕಾಗಿ ರೂ. 2 ಸಾವಿರ ಮಾತ್ರ ಅಂಗನವಾಡಿ ಕಾರ್ಯಕರ್ತೆಯವರ ಖಾತೆಗೆ ಜಮೆ ಮಾಡುವಂತೆ ಸೂಚನೆ ಇರುತ್ತದೆ, 3 ಸಾವಿರ ಹಣಕ್ಕೆ ಪಾತ್ರೆ ಮತ್ತು ಎಪ್ರಾನ್‌ಗಳನ್ನು ಮತ್ತು ರಿಜಿಸ್ಟರ್‌ಗಳನ್ನು ಎದುರುದಾರರು ಹೇಳಿದ ಏಜನ್ಸಿಯಲ್ಲೇ

ಖರೀದಿ ಮಾಡುವಂತೆ ರಾಮದುರ್ಗ ತಾಲ್ಲೂಕಿನ ಎಲ್ಲಾ ಅಂಗನವಾಡಿ ಕಾರ್ಯಕರ್ತೆಯರಿಗೆ ಮೌಖಿಕವಾಗಿ ಸೂಚಿಸಿರುತ್ತಾರೆ ಎಂಬುದಾಗಿ ಅಪಾದಿಸಿರುತ್ತಾರೆ.

3. ಮುಂದುವರೆದು ಎದುರುದಾರರು ಅಂಗನವಾಡಿ ಕೇಂದ್ರಗಳಿಗೆ ಬೇಕಾಗುವ ಸಾಮಾಗ್ರಿಗಳನ್ನು ಬೆಳಗಾವಿ ನಗರದ ಜೋತಿ ಎಂಟರ್‌ಪ್ರೈಸಸ್ ಇವರಿಂದ ಖರೀದಿ ಮಾಡುವಂತೆ ಅಂಗನವಾಡಿ ಕೇಂದ್ರದ ಕಾರ್ಯಕರ್ತೆಯವರಿಗೆ ಸೂಚಿಸಿರುತ್ತಾರೆ, ಅದರಂತೆ ಕಾರ್ಯಕರ್ತೆಯವರ ಹೆಸರಿನಲ್ಲಿ 01/04/2016 ರಿಂದ 31/03/2018 ರವರೆಗೆ ಖರೀದಿ ಮಾಡಿರುತ್ತಾರೆ. ರಾಮದುರ್ಗದಿಂದ ಬೆಳಗಾವಿ ನಗರಕ್ಕೆ ಸುಮಾರು 95 ಕಿ.ಮೀ. ದೂರವಿದ್ದು, ಅಂಗನವಾಡಿ ಕಾರ್ಯಕರ್ತೆಯರುಗಳು ಬೆಳಗಾವಿ ನಗರಕ್ಕೆ ಬಂದು ಸಾಮಾಗ್ರಿಗಳನ್ನು ಖರೀದಿ ಮಾಡಿರುತ್ತಾರೆ. ರಿಜಿಸ್ಟರ್‌ಗಳನ್ನು ಟೆಂಡರ್ ಮೂಲಕ ಖರೀದಿ ಮಾಡಬೇಕಾಗಿದ್ದು, ಆ ರೀತಿ ಮಾಡದೆ ಸರ್ಕಾರದ ಹಣವನ್ನು ದುರುಪಯೋಗ ಮಾಡಿರುವುದರಿಂದ ಸೂಕ್ತ ಕಾನೂನು ಕ್ರಮ ಜರುಗಿಸುವಂತೆ ವಿನಂತಿಸಿ ದೂರು ಸಲ್ಲಿಸಿರುತ್ತಾರೆ.

4. <u>ಎದುರುದಾರರ ಆಕ್ಷೇಪಣೆ</u>:- ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ರವರ ಪತ್ರ ದಿನಾಂಕ: 07/01/2017 ರಲ್ಲಿ ತಿಳಿಸಿರುವಂತೆ ಒಟ್ಟು ರೂ. 5000/- ಗಳನ್ನು ವೆಚ್ಚ ಮಾಡಲು ಅವಕಾಶ ಕಲ್ಪಿಸಲಾಗಿದೆ. ಈ ಪತ್ರದನ್ವಯ ಅಂಗನವಾಡಿ ಕಾರ್ಯಕರ್ತೆ/ಸಹಾಯಕಿಯರಿಗೆ ರೂ. 4000/- ಗಳನ್ನು ಅವರುಗಳ ಖಾತೆಗೆ ಜಮಾ ಮಾಡಲಾಗಿರುತ್ತದೆ. ಅಂಗನವಾಡಿ ಕೇಂದ್ರಕ್ಕೆ ಅವಶ್ಯಕತೆ ಇರುವ ರಿಜಿಸ್ಟರ್, ಪಾತ್ರೆ ಮತ್ತು ಜಮಖಾನಗಳನ್ನು ಅಂಗನವಾಡಿ ಕಾರ್ಯಕರ್ತೆಯರುಗಳು ಖರೀದಿಸಿರುತ್ತಾರೆ. ಅಂಗನವಾಡಿ ಕಾರ್ಯಕರ್ತೆಯರಿಗೆ ಇಂತಲ್ಲಿಯೇ ಖರೀದಿ ಮಾಡಬೇಕೆಂದು ತಾನು ನಿರ್ದೇಶನ ನೀಡಿರುವುದಿಲ್ಲ. ಈ ಅನುದಾನದಲ್ಲಿ ಎಫ್ರಾನ್ ಗಳನ್ನು ಖರೀದಿ ಮಾಡಿರುವುದಿಲ್ಲ. ಸ್ಥಳೀಯವಾಗಿ ಖರೀದಿಸಿರುವುದು ಕಂಡು ಬಂದಿರುತ್ತದೆ ಎಂದು ನಮೂದಿಸಿರುತ್ತಾರೆ. ಎದುರುದಾರರು ದಿನಾಂಕ: 07/01/2017

ರ ನಿರ್ದೇಶಕರ ಆದೇಶದ ಪ್ರತಿ ಲಗತ್ತಿಸಿದ್ದು ಸದರಿ ಪತ್ರದಲ್ಲಿ ಅಂಗನವಾಡಿ ಕಾರ್ಯಕರ್ತೆಯರ ಖಾತೆಗೆ ಫ್ಲೆಕ್ಸಿಫಂಡ್ ಮತ್ತು ಸಾದಿಲ್ವಾರ ಕಾರ್ಯಕ್ರಮಗಳ ಸಂಬಂಧಿಸಿದಂತೆ ನಿಯಮಾನುಸಾರ ಅನುದಾನವನ್ನು ಜಮಾಗೊಳಿಸಲು ನಿರ್ದೇಶನ ನೀಡಿರುತ್ತಾರೆ.

5. <u>ಪಿರ್ಯಾದುದಾರರ ಪ್ರತ್ಯುತ್ತರ:-</u> ಅಂಗನವಾಡಿ ಕಾರ್ಯಕರ್ತೆಯವರ ಬ್ಯಾಂಕ್ ಖಾತೆಗೆ ಇಲಾಖೆಯ ನಿರ್ದೇಶಕರು ಫ್ಲೆಕ್ಷಿ ಫಂಡ್ ಮತ್ತು ಸಾಧಿಲ್ವಾವಾರು ವೆಚ್ಚಕ್ಕೆ ಸಂಬಂಧಪಟ್ಟಂತೆ ಹಣ ಜಮೆ ಮಾಡುವಂತೆ ಆದೇಶವನ್ನು ಹೊರಡಿಸಿರುತ್ತಾರೆ. ಎದುರುದಾರರು ಆದೇಶವನ್ನು ಉಲ್ಲಂಘಿಸಿ 3 ವರ್ಷಗಳಿಂದ ಇದೇ ರೀತಿ ಮಾಡಿರುತ್ತಾರೆ, ರಿಜಿಸ್ಟಾರ್ ಪುಸ್ತಕಗಳನ್ನು ಮತ್ತು ಪಾತ್ರೆಗಳನ್ನು ಎದುರುದಾರರು ಖರೀದಿ ಮಾಡಿಸಿ ಯಾವುದೇ ದಾಖಲೆಗಳನ್ನು ನೀಡಿರುವುದಿಲ್ಲ; ಖರೀದಿ ಮಾಡಿರುವ ಬಿಲ್ಲುಗಳನ್ನು ಪಡೆದು ಪರಿಶೀಲಿಸಿ ಸಂಬಂಧಪಟ್ಟ ಅಧಿಕಾರಿಯ ಮೇಲೆ ಸೂಕ್ತವಾದ ಕಾನೂನು ಕ್ರಮ ಜರುಗಿಸಿ ಸಂಬಂಧಪಟ್ಟವರಿಂದ ನಷ್ಟವಾಗಿರುವ ಹಣವನ್ನು ಸರ್ಕಾರಕ್ಕೆ ಜಮೆ ಮಾಡಿಸುವಂತೆ ಆದೇಶಿಸಬೇಕೆಂದು ನಮೂದಿಸಿರುತ್ತಾರೆ. ಎದುರುದಾರರು 2016 ರಿಂದ 2018 ರವರೆಗೆ ಖರೀದಿ ಪ್ರಕ್ರಿಯೆಯಲ್ಲಿ ಹಣ ದುರುಪಯೋಗ ಪಡಿಸಿರುವುದಾಗಿ ದೂರಿನಲ್ಲಿ ಆರೋಪಿಸಿರುತ್ತಾರೆ.

6. 2016 ರಿಂದ 2018ರ ಲೆಕ್ಕ ಪತ್ರಗಳನ್ನು ಪರಿಶೋಧಿಸಿದ ಲೆಕ್ಕಪರಿಶೋಧಕರ ವರದಿಯ ಪ್ರತಿಯನ್ನು ಎದುರುದಾರರು ಸಲ್ಲಿಸಿರುವುದಿಲ್ಲ. ಎದುರುದಾರನಿಗೆ ದಾಖಲೆಗಳನ್ನು ಸಲ್ಲಿಸುವಂತೆ ಈ ಕಛೇರಿಯಿಂದ ಸೂಚಿಸಿದಾಗಲೂ, ಎದುರುದಾರನು ಯಾವುದೇ ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಆದ್ದರಿಂದ ದಾಖಲೆಗಳನ್ನು ಎದುರುದಾರನು ಸಲ್ಲಿಸದೇ ಇದುದ್ದರಿಂದ ಕರ್ನಾಟಕ ಲೋಕಾಯುಕ್ತ ಪೋಲಿಸರಿಂದ ತನಿಖೆ ಮಾಡಿ ವರದಿ ಸಲ್ಲಿಸುವಂತೆ ಸೂಚಿಸಲಾಗಿತ್ತು.

7. ಪೋಲೀಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ ಬೆಳಗಾವಿ ರವರು ತಮ್ಮ ತನಿಖಾವರದಿಯಲ್ಲಿ ಎದುರುದಾರರಾದ ಶ್ರೀಮತಿ ಖಾದರಬೀ ಲಕ್ಷ್ಮೇಶ್ವರ ಇವರು ದಿ: 05/07/2014 ರಿಂದ 15/07/2014 ರ ವರೆಗೆ ಮತ್ತು ದಿನಾಂಕ: 07/11/2016 ರಿಂದ 21/09/2019 ರ ವರೆಗೆ ರಾಮದುರ್ಗ ತಾಲೂಕಿನ ಪ್ರಭಾರಿ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳಾಗಿ ಕರ್ತವ್ಯ ನಿರ್ವಹಿಸಿದ್ದು, ಅವರ ಅವಧಿಯಲ್ಲಿ ನಿರ್ದೇಶಕರು, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಬೆಂಗಳೂರು ಇವರ ಆದೇಶ ದಿ: 07/01/2017 ರಂತೆ ರಾಮದುರ್ಗ ತಾಲೂಕಿನಲ್ಲಿರುವ 298 ಅಂಗನವಾಡಿ ಕೇಂದ್ರಗಳ ಕಾರ್ಯಕರ್ತೆಯರ ಬ್ಯಾಂಕ್ ಖಾತೆಗಳಿಗೆ ಶಿಶು ಅಭಿವೃದ್ಧಿ ಯೋಜನೆಗೆ ಬರುವ ಅನುದಾನದಿಂದ ತಲಾ ರೂ. 4,000/- ರಂತೆ ಒಟ್ಟು 11,92,000/- ರೂಗಳನ್ನು ಜಮಾ ಮಾಡಿರುತ್ತಾರೆ. ಅರ್ಜಿದಾರರು ಅಪಾದಿಸಿರುವಂತೆ ಕೇವಲ 2,000/- ರೂಗಳನ್ನು ಮಾತ್ರ ಜಮಾ ಮಾಡಲು ಅಧಿಕಾರವಿದೆ ಎನ್ನುವ ನಿರ್ಭಂಧ ಇರುವುದಿಲ್ಲ. ಮೇಲಿನ ಆದೇಶದಂತೆ ಒಟ್ಟು 5,000/- ರೂಗಳ ವರೆಗೆ ಜಮಾ ಮಾಡಲು ಅವಕಾಶವಿದ್ದು, ಎದುರುದಾರರು ರೂ. 4,000/- ಗಳನ್ನು ಮಾತ್ರ ಅಂಗನವಾಡಿ ಕಾರ್ಯಕರ್ತೆಯರ ಬ್ಯಾಂಕ್ ಖಾತೆಗಳಿಗೆ ಜಮಾ ಮಾಡಿರುತ್ತಾರೆಂದು ತಿಳಿಸಿರುತ್ತಾರೆ.

8. ಮುಂದುವರೆದು, ಪೋಲಿಸ್ ಅಧೀಕ್ಷಕರು ತಮ್ಮ ತನಿಖಾ ವರದಿಯಲ್ಲಿ ಅಂಗನವಾಡಿ ಕಾರ್ಯಕರ್ತೆಯರೇ ತಮಗೆ ಬೇಕಾಗುವ ರಿಜಿಸ್ಟರ್‌ಗಳನ್ನು ಅವರ ಬ್ಯಾಂಕ್ ಖಾತೆಗೆ ಜಮಾ ಮಾಡಲಾದ ಹಣದಲ್ಲಿ ಖರೀದಿಸಿರುವುದಾಗಿ, ಮತ್ತು ಎದುರುದಾರರು ಎಲ್ಲಾ ಅಂಗನವಾಡಿ ಕೇಂದ್ರಗಳ ರಿಜಿಸ್ಟರ್‌ಗಳು ಒಂದೇ ರೀತಿಯಾಗಿ ಇರಲಿ ಎನ್ನುವ ಉದ್ದೇಶದಿಂದ ರಿಜಿಸ್ಟರ್‌ಗಳನ್ನು ಜ್ಯೋತಿ ಎಂಟರ್‌ಪ್ರೈಸಸ್ ರವರಿಂದ ಖರೀದಿಸಲು ಮೌಖಿಕವಾಗಿ ಸೂಚಿಸಿರುವ ಬಗ್ಗೆ ಕಂಡುಬರುವುದಾಗಿ ನಮೂದಿಸಿರುತ್ತಾರೆ.

9. ಮುಂದುವರೆದು, 2017-18 ನೇ ಸಾಲಿನ ಮಾತೃಪೂರ್ಣ ಯೋಜನೆ ಸಲುವಾಗಿ ಅಂಗನವಾಡಿ ಕೇಂದ್ರಗಳಿಗೆ ಅವಶ್ಯವಿರುವ ಪಾಕೋಪಕರಣಗಳನ್ನು ಟೆಂಡರ್ ಮೂಲಕ ಆಯ್ಕೆಯಾದ ಶ್ರೀ ಸಂಗಮೇಶ್ ಎಂಟರ್‌ಪ್ರೈಸಸ್ ರವರಿಂದ ಖರೀದಿಸಲು ತಾಲೂಕು ಕಾರ್ಯನಿರ್ವಹಣಾಧಿಕಾರಿಗಳು ತಾಲೂಕು ಪಂಚಾಯತ್ ರಾಮದುರ್ಗ ರವರಿಂದ ದಿ: 27/03/2018 ರಂತೆ ಆದೇಶವಾಗಿದ್ದು, ರೂ. 35,41,730/- ಗಳಿಗೆ ಪಾಕೋಪಕರಣಗಳನ್ನು ಖರೀದಿಸಿ ಅಂಗನವಾಡಿ ಕೇಂದ್ರಗಳಿಗೆ ವಿತರಿಸಿದ್ದು, ಟೆಂಡರ್ ಇಲ್ಲದೇ 1 ಲಕ್ಷಕ್ಕಿಂತ ಹೆಚ್ಚು ಮೌಲ್ಯದ ವಸ್ತುಗಳನ್ನು ಖರೀದಿ ಮಾಡಿದ ಬಗ್ಗೆ ಯಾವುದೇ ದಾಖಲೆಗಳು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

10. ಪೋಲಿಸ್ ಅಧೀಕ್ಷಕರು ಕರ್ನಾಟಕ ಲೋಕಾಯುಕ್ತ ಬೆಳಗಾವಿ ರವರು ಎದುರುದಾರರು 2018ನೇ ಸಾಲಿನಲ್ಲಿ ಖರೀದಿಸಿರುವ ಎಪ್ರಾನ್‌ಗಳ ಬಗ್ಗೆ ವಿವರಿಸುತ್ತಾ ರಾಮದುರ್ಗ ತಾಲೂಕಿನ ವ್ಯಾಪ್ತಿಯಲ್ಲಿ ಬರುವ ಅಂಗನವಾಡಿ ಕೇಂದ್ರಗಳ ಉಪಯೋಗಕ್ಕಾಗಿ 25 ಫಾಯರ್ ರೆಸಿಸ್ಟೆಂಟ್ ಎಪ್ರಾನ್ ಖರೀದಿಸಲು ದರ ಪಟ್ಟಿಗಳನ್ನು ಪಡೆದು ತುಲನಾತ್ಮಕ ಪಟ್ಟಿಯನ್ನು ತಯಾರಿಸಿ, ಕಾರ್ಯನಿರ್ವಾಹಕ ಅಧಿಕಾರಿಗಳು ತಾಲೂಕು ಪಂಚಾಯತ್, ರಾಮದುರ್ಗ ರವರು ಆದೇಶ ದಿನಾಂಕ: 12/03/2018 ರಂತೆ ಒಟ್ಟು 25 ಎಪ್ರಾನ್‌ಗಳನ್ನು ರೂ. 84,000/- ಗಳಿಗೆ ಮೆ: ಬ್ರೈಟ್ಸ್ ಬ್ರಾಂಡ್ಸ್ ಹುಬ್ಬಳ್ಳಿ ರವರಿಂದ ಖರೀದಿ ಮಾಡಿ, ಚೆಕ್ ಮುಖಾಂತರ ರೂ. 84,000/- ಗಳನ್ನು ಪಾವತಿಸಿರುವುದಾಗಿ ತನಿಖಾ ವೇಳೆಯಲ್ಲಿ ಮೇಲ್ಕಂಡ ಸರಬರಾಜುದಾರರು ಪೂರೈಸಿದ ಎಪ್ರಾನ್‌ಗಳನ್ನು ಪರಿಶೀಲಿಸಿದಾಗ ಅದರ ಮೇಲೆ ಸ್ಟಿಕ್ಕರ್‌ಗಳನ್ನು ಅಂಟಿಸಿದ್ದು, ಅದರ ಮೇಲೆ "SAFEPRON FIRE PROOF APRON 100% FIRE RETRARDANT" ಎಂದು ಬರೆದಿರುವುದಾಗಿ, ಈ ಸ್ಟಿಕ್ಕರ್‌ನಲ್ಲಿ ಎಂ.ಆರ್.ಪಿ ರೂ.999/- (inclusive of all taxes) ಎಂದು ನಮೂದಿಸಿರುವುದಾಗಿ ತಿಳಿಸಿರುತ್ತಾರೆ. ತನಿಖಾಧಿಕಾರಿಯವರು ಮೇಲ್ಕಂಡ ಎಪ್ರಾನ್‌ಗಳನ್ನು ಉಪನಿರ್ದೇಶಕರು, ಕೈಮಗ್ಗ ಮತ್ತು ಜವಳಿ ಇಲಾಖೆ ಜಿ.ಪಂ. ಬೆಳಗಾವಿ ಇವರ ಮೂಲಕ ಪರಿಶೀಲಿಸಿದ್ದು,

ಎಪ್ರಾನ್‌ನ್ನು ಪಾಲಿಪ್ರಾಪಿಲೇನ್ ನಿಂದ ತಯಾರಿಸಿದ್ದು, ಇದನ್ನು ಕಾಟನ್ 53% ಮತ್ತು ಪಾಲಿಸ್ಟರ್ 47% ಖಚ್ಚಾ ಮಾಲಿನಿಂದ ತಯಾರಿಸಿದ್ದು ಕಂಡುಬಂದಿದ್ದು, ಅದರ ಮಾರಾಟ ಬೆಲೆ 2018ರ ಮಾರ್ಚ್ ತಿಂಗಳಲ್ಲಿ ರೂ. 950/- ನಿಂದ ರೂ. 1000/- ಆಗಬಹುದೆಂದು ಖಾತರಿ ಪಡಿಸಿಕೊಂಡಿರುತ್ತಾರೆ. ಇವುಗಳ ಮೇಲಿಂದ ತನಿಖಾಧಿಕಾರಿಯವರು ಎದುರುದಾರರಾದ ಶ್ರೀಮತಿ ಖಾದರಬೀ ಲಕ್ಮೇಶ್ವರ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ರಾಮದುರ್ಗ ರವರು ಗರಿಷ್ಠ ಮಾರಾಟ ಬೆಲೆ 1 ಕ್ಕೆ ರೂ. 999/- ಬೆಲೆಬಾಳುವ ಎಪ್ರಾನಿಗೆ 3,360 ರಂತೆ ಪಾವತಿ ಮಾಡಿ ಒಟ್ಟು 25 ಎಪ್ರಾನ್‌ಗಳನ್ನು ರೂ. 84,000/- ಗಳಿಗೆ ಖರೀದಿಸಿದ್ದು, ಸರ್ಕಾರಕ್ಕೆ 59,025/- ರೂಗಳ ನಷ್ಟವುಂಟು ಮಾಡಿರುತ್ತಾರೆಂದು ತಿಳಿಸಿರುತ್ತಾರೆ.

11. ತನಿಖಾಧಿಕಾರಿಯವರು ತಮ್ಮ ತನಿಖಾ ವೇಳೆಯಲ್ಲಿ ಸಂಬಂಧಪಟ್ಟ ಸಾಕ್ಷಿಗಳ ಹೇಳಿಕೆಗಳನ್ನು ಮತ್ತು ದಾಖಲೆಗಳನ್ನು ಪಡೆದುಕೊಂಡಿದ್ದು, ತನಿಖಾವರದಿಯ ಜೊತೆಗೆ ಲಗತ್ತಿಸಿರುತ್ತಾರೆ.

12. ಪೋಲಿಸ್ ಅಧೀಕ್ಷಕರು, ಕರ್ನಾಟಕ ಲೋಕಾಯುಕ್ತ, ಬೆಳಗಾವಿ ರವರು ಸಲ್ಲಿಸಿರುವ ತನಿಖಾವರಧಿ ಹಾಗೂ ಅದರೊಂದಿಗಿನ ದಾಖಲೆಗಳನ್ನು ಪರಿಶೀಲಿಸಲಾಗಿ ತನಿಖಾಧಿಕಾರಿಯವರು ತಿಳಿಸಿರುವಂತೆ, ಎದುರುದಾರರಾದ ಶ್ರೀಮತಿ ಖಾದರಬೀ ಲಕ್ಮೇಶ್ವರ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ರಾಮದುರ್ಗ ರವರು ಗರಿಷ್ಠ ಮಾರಾಟ ಬೆಲೆ 1 ಕ್ಕೆ ರೂ. 999/- ಬೆಲೆಬಾಳುವ ಎಪ್ರಾನಿಗೆ 3,360 ರಂತೆ ಪಾವತಿ ಮಾಡಿ ಒಟ್ಟು 25 ಎಪ್ರಾನ್‌ಗಳನ್ನು ರೂ. 84,000/- ಗಳಿಗೆ ಖರೀದಿಸಿದ್ದು, ಸರ್ಕಾರಕ್ಕೆ 59,025/- ರೂಗಳನ್ನು ನಷ್ಟವುಂಟುಮಾಡಿ ಈ ಮೂಲಕ ಎದುರುದಾರರು ತಮ್ಮ ಕರ್ತವ್ಯದಲ್ಲಿ ನಿರ್ಲಕ್ಷತನವನ್ನು ತೋರಿಸಿ ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡುಬರುತ್ತದೆ. ಆದ್ದರಿಂದ ಎದುರುದಾರರನ್ನು ಇಲಾಖಾ ವಿಚಾರಣೆಗೆ ಒಳಪಡಿಸುವುದು ಅವಶ್ಯವಾಗಿರುತ್ತದೆ.

13. ಮೇಲ್ಕಾಣಿಸಿದ ಕಾರಣಗಳಿಂದ ಎದುರುದಾರರಾದ ಶ್ರೀಮತಿ ಖಾದರಬೀ ಲಕ್ಮೇಶ್ವರ್, ಶಿಶು ಅಭಿವೃದ್ಧಿ ಯೋಜನಾಧಿಕಾರಿ, ರಾಮದುರ್ಗ ರವರ ವಿರುದ್ಧ ಇಲಾಖಾ ವಿಚಾರಣೆ ಹೂಡಲು ಮತ್ತು ಇಲಾಖಾ ವಿಚಾರಣೆಯನ್ನು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿರ್ಬಂಧ ಮತ್ತು ಮೇಲ್ಮನವಿ) ನಿಯಮಗಳ ನಿಯಮ, 1957ರ ನಿಯಮ 14-ಎ ರಂತೆ ಈ ಪ್ರಾಧಿಕಾರಕ್ಕೆ ವಹಿಸಲು ಕರ್ನಾಟಕ ಲೋಕಾಯುಕ್ತ ಕಾಯ್ದೆ ಕಲಂ 12(3) ರನ್ವಯ ಪ್ರದತ್ತವಾದ ಅಧಿಕಾರದಡಿ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗಿದೆ.

14. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯ್ದೆಯ ಕಲಂ 12(4) ರ ಪ್ರಕಾರ, ಸಕ್ಷಮ ಪ್ರಾಧಿಕಾರವು ಈ ವರದಿಯನುಸಾರ ಕೈಗೊಂಡ ಕ್ರಮದ ಬಗ್ಗೆ ಅಥವಾ ಕೈಗೊಳ್ಳಬಹುದಾದ ಕ್ರಮದ ಬಗ್ಗೆ, ಈ ವರದಿ ತಲುಪಿದ ದಿನಾಂಕದಿಂದ ಮೂರು ತಿಂಗಳೊಳಗಾಗಿ ಈ ಪ್ರಾಧಿಕಾರಕ್ಕೆ ವರದಿಯನ್ನು ಸಲ್ಲಿಸಬೇಕಾಗಿರುತ್ತದೆ.

ಈ ವರದಿಯೊಂದಿಗೆ ಸಂಬಂಧಪಟ್ಟ ದಾಖಲೆಗಳನ್ನು ಲಗತಿಸ್ತಿದೆ.

9/2/21

[ನ್ಯಾಯಮೂರ್ತಿ ಬಿ.ಎಸ್.ಪಾಟೀಲ್]
**ಉಪಲೋಕಾಯುಕ್ತರು,**
**ಕರ್ನಾಟಕ ರಾಜ್ಯ, ಬೆಂಗಳೂರು.**